**ಪಿ ಡಬ್ಲ್ಯೂಃ 1**

ದಿನಾಂಕ 18-04-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ನಾನು ಪಿಯುಸಿ ವ್ಯಾಸಾಂಗ ಮಾಡಿರುತ್ತೇನೆ. ದಾವಾ ಆಸ್ತಿಯು ನನಗೆ ನನ್ನ ತಂದೆಯಿಂದ ಅವರಿಗೆ ನನ್ನ ಅಜ್ಜನಿಂದ ಬಂದಿರುತ್ತದೆ. ನನ್ನ ತಂದೆಗೆ ನಾನು ಒಬ್ಬನೇ ಮಗ. 1962 ರಲ್ಲಿ ನನ್ನ ಅಜ್ಜನಿಗೆ ಸರ್ಕಾರದಿಂದ ಪಟ್ಟಾ ಮಂಜೂರಾಗಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನಿಪಿ 5 ಮತ್ತು 6 ರ ದಾಖಲೆಗಳನ್ನು ನೋಡಿ ಸದರಿ ದಾಖಲೆಗಳನ್ನು ಮಂಜೂರಾತಿಗೆ ಸಂಬಂಧಪಟ್ಟಂತೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಗಳು ಹಕ್ಕು ಬದಲಾವಣೆಯ ವಹಿಗಳಾಗಿದ್ದು ಪಟ್ಟಾ ದಾಖಲೆಗಳಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು 1979 ರವರೆಗಿನ ಪಟ್ಟಾ ಪುಸ್ತಕಗಳು ತಾಲೂಕು ಕಚೇರಿಯಲ್ಲಿ ಲಭ್ಯವಿರುವುದಿಲ್ಲ ಎಂದು ನುಡಿದಿರುತ್ತಾರೆ. ಮೂಲ ಪಟ್ಟಾ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ತುಂಬಾ ಹಳೆಯದಾದ ದಾಖಲೆಗಳಾಗಿದ್ದು ನನ್ನ ಬಳಿ ಇರುವುದಿಲ್ಲ.

2. ನನ್ನ ಅಜ್ಜನಿಗೆ ಸರ್ಕಾರದಿಂದ ಎಷ್ಟು ವಿಸ್ತೀರ್ಣದ ಆಸ್ತಿ ಮಂಜೂರಾಗಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. 1969 ರಲ್ಲಿ ಪಟ್ಟಾ ಮಂಜೂರಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 1956 ರಲ್ಲಿ ನನ್ನ ಅಜ್ಜನಿಗೆ ಪಟ್ಟಾ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

3. ನನ್ನ ತಾತನ ಹೆಸರು ರಾಮಪ್ಪ ಕನ್ನಪ್ಪ ಕಡ್ಡಿ ಎಂದರೆ ಸರಿ. ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಿ 1956 ರಲ್ಲಿ ನನ್ನ ತಾತನಿಗೆ 3 ಗುಂಟೆ ಜಾಗ ಪಟ್ಟ ಮಂಜೂರಾಗಿರುತ್ತದೆ ಎಂದು ಕೇಳಲಾಗಿ ಸದರಿ ದಾಖಲೆಯನ್ನು ನೋಡಿ ಗುರುತಿಸಿ ಒಪ್ಪಿದ ಮೇರೆಗೆ ಅದನ್ನು **ನಿಡಿ 1** ಎಂದು ಗುರುತಿಸಲಾಯಿತು. ಸದರಿ ದಾಖಲೆಯಂತೆ ನನ್ನ ಅಜ್ಜನಿಗೆ ಪ್ಲಾಟ್ ನಂ.1 ರಲ್ಲಿ 3 ಗುಂಟೆ ಜಾಗ ದಿನಾಂಕ 26-12-1955 ರಲ್ಲಿ ಮಂಜೂರಾಗಿದೆ ಎಂದರೆ ಸರಿ. ಪಟ್ಟಾ ದಾಖಲೆಯಂತೆ ದಾವಾ ಸ್ವತ್ತಿನ ಕವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಚಾಲ್ತಿ ಆರ್.ಟಿ.ಸಿ.ಯಲ್ಲಿ ಇರುವ ವಿಸ್ತೀರ್ಣವನ್ನು ನಮೂದು ಮಾಡಲಾಗಿರುತ್ತದೆ.

**ಪಿ ಡಬ್ಲ್ಯೂ: 1**

4. ಪ್ಲಾಟ್ ನಂ.1 ರ ಜಾಗ ಮಂಜೂರಾದ ಕಾಲಕ್ಕೆ ನನ್ನ ಅಜ್ಜನಿಗೆ ಪ್ಲಾಟ್ ನಂ.63 ಮತ್ತು 64 ರಲ್ಲಿ ತಲಾ 3 ಗುಂಟೆಯಂತೆ ಮಂಜೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ತಲಾ 4 ಗುಂಟೆ 14 ಆಣೆ ಜಾಗ ಮಂಜೂರಾಗಿರುತ್ತದೆ ಎಂದು ನುಡಿದಿರುತ್ತಾರೆ. ಸರ್ಕಾರದ ನಿಯಮಾವಳಿಗಳಂತೆ ಒಂದು ಕುಟುಂಬಕ್ಕೆ ಒಂದು ನಿವೇಶನವನ್ನು ಮಾತ್ರ ಮಂಜೂರು ಮಾಡಲಾಗುತ್ತದೆ ಎಂದರೆ 1956 ರಲ್ಲಿ ಯಾವ ನಿಯಮಾವಳಿ ಇತ್ತು ಎಂದು ನನಗೆ ತಿಳಿದಿಲ್ಲ. ನನ್ನ ಅಜ್ಜ ಪ್ರಭಾವಿ ವ್ಯಕ್ತಿಯಾಗಿದ್ದರಿಂದ ಹೆಚ್ಚು ಜಾಗವನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ವಾರಸಾ ಪ್ರಕಾರ ನನ್ನ ತಂದೆಗೆ ಬಂದಿರುತ್ತದೆ ಎಂದರೆ ಸರಿ. ನನ್ನ ಅಜ್ಜನಿಗೆ ನನ್ನ ತಂದೆ ಸೇರಿದಂತೆ 3 ಜನ ಮಕ್ಕಳು. ಸದರಿ 3 ಜನರು ಮೃತಪಟ್ಟಿರುತ್ತಾರೆ. ಅವರು ಮರಣಾ ನಂತರ ಕುಟುಂಬದ 13 ಜನರಿಗೆ ವಾರಸಾ ಪ್ರಕಾರ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.